

ಯಾವುದೇ ನಾಟ್ಯ ಪ್ರದರ್ಶನದ ಶೈಲಿ ಬದಲಾಗಿದೆ. ಭಾರೀ ವಿಸ್ತಾರವಾದ ಅಥವಾ ಬೃಹತ್ ವೇದಿಕೆಗಳಲ್ಲಿ ನೃತ್ಯ ಪ್ರದರ್ಶನ ಮಾಡುವ ವಾಡಿಕೆ ಹೆಚ್ಚಾಗಿದೆ. ಅಂದರೆ ವಿಶಾಲ ವೇದಿಕೆಯಲ್ಲಿ ನೂರಾರು ಮಂದಿ ಕಲಾವಿದರು ಒಟ್ಟಾಗಿ ನರ್ತಿಸುವುದು. 'ಫಾರ್ಮೇಶನ್'ಗಳನ್ನು ಪ್ರಸ್ತುತಪಡಿಸಿ ಪ್ರೇಕ್ಷಕರಿಂದ 'ವಾವ್' ಎಂದು ಅನ್ನಿಸಿಕೊಳ್ಳುವುದು ಮುಂತಾಗಿ. ಡಿಜಿಟಲ್ ಯುಗದಲ್ಲಿ ಬೆಳಕಿನ ಸಂಯೋಜನೆ, ಧ್ವನಿಯ ಪರಿಣಾಮಕಾರಿ ಬಳಕೆಗಳ ಬಗ್ಗೆಯೂ ಗಮನ ಕೊಡಲಾಗುತ್ತದೆ. ಅವೂ ತಮ್ಮದೇ ಆದ ಪರಿಣಾಮ ಬೀರುತ್ತವೆ. ಅದರೊಂದಿಗೆ ಕಲಾವಿದರ ಮನೋಧರ್ಮ ಹೊಂದಾಣಿಕೆ ಆಗಬೇಕು. ಒಟ್ಟಿನಲ್ಲಿ ಇಂತಹ ನೃತ್ಯಗಳು ಮನೋರಂಜನೆಯ ದೃಷ್ಟಿಯಿಂದ ಮುಖ್ಯವೇ. ಬೃಹತ್ ಜನಸ್ತೋಮವನ್ನು ರಂಜಿಸುವುದಕ್ಕಾಗಿ ದೊಡ್ಡ ತಂಡವು ನೃತ್ಯ ಪ್ರದರ್ಶನ ನೀಡುವುದು ಅವಶ್ಯಕವಾಗುತ್ತದೆ. ಆದರೆ ಪ್ರೇಕ್ಷಕರಿಗಾಗಲೀ, ಕಲಾವಿದರಿಗಾಗಲೀ ಆನಂದವನ್ನು ಪಡೆಯುವುದಕ್ಕೆ ಸಣ್ಣ ವೇದಿಕೆಗಳೇ ಹೆಚ್ಚು ಪೂರಕ. 'ಸೀತಾವಿಯೋಗ'ದ ಒಂದು ದೃಶ್ಯವು ವಿಲಂಬಗತಿಯಲ್ಲಿ ಪ್ರಸ್ತುತಗೊಳ್ಳುವಾಗ ಅಲ್ಲಿ ಭಾರಿ ಕರತಾಡನಗಳಿಗೆ, ಶಿಳ್ಳೆಗಳಿಗೆ ಅವಕಾಶ ಇರುವುದಿಲ್ಲ. ರಾಮನ ದುಃಖವು ಸಣ್ಣ ಪ್ರಮಾಣದ ಸಭೆಗಳಲ್ಲಿ ಹೆಚ್ಚು ಜನರನ್ನು ತಟ್ಟುವುದು. ರಸಿಕರ ಕಣ್ಣಲ್ಲೂ ನೀರು ಹನಿಯುವುದು. 'ಸಚ್ಚಿದಾನಂದ', 'ಆತ್ಮಾನಂದ'ವನ್ನು ಪಡೆಯುವ ತಾಳ್ಮೆಯು ಈ ಮನರಂಜನಾ ಪ್ರಧಾನ ಕಾರ್ಯಕ್ರಮದಲ್ಲಿ ದೊರೆಯುವುದು ಕಷ್ಟ. ಅಸಾಧ್ಯವೆಂದೇನೂ ಹೇಳಲಾರೆ. ಆದರೆ ಅಂತಹ ಸಿದ್ಧಿಗೆ ಒಂದು ಪ್ರಶಾಂತ ಹಿನ್ನೆಲೆಯೂ ಬೇಕೆನಿಸುತ್ತದೆ. ಪ್ರೇಕ್ಷಕರಿಗೂ ಕಲೆ ಮತ್ತು ಸಾಹಿತ್ಯದ ಕುರಿತು ಪೂರ್ವಜ್ಞಾನ ಇರಬೇಕಾಗುತ್ತದೆ.

◆ **ಈ ಪೂರ್ವಜ್ಞಾನವನ್ನು ಹೊಸತಲೆಮಾರಿನ ವಿದ್ಯಾರ್ಥಿಗಳಿಗೆ ದಾಟಿಸುವ ರೀತಿಯಲ್ಲಿ ಬದಲಾವಣೆಗಳಾಗಿವೆಯೇ?**

ಗಣನೀಯ ಬದಲಾವಣೆಗಳಾಗಿವೆ. ಹಿಂದೆಲ್ಲ ನೃತ್ಯ ತರತಿಗೆ ಬರುವ ವಿದ್ಯಾರ್ಥಿಗಳಿಗೆ ನಮ್ಮ ದೇಶದ ಇತಿಹಾಸ, ಮಹಾಕಾವ್ಯಗಳು, ಪುರಾಣಗಳ ಬಗ್ಗೆ ತಿಳಿದಿರುತ್ತಿತ್ತು. ಆದ್ದರಿಂದ ಆ ಬಗ್ಗೆ ಪ್ರತ್ಯೇಕವಾಗಿ ನಾವು ಅವರಿಗೆ ಹೇಳಬೇಕಿರಲಿಲ್ಲ. ನೃತ್ಯವನ್ನು ಕಲಿಯುತ್ತ ಆಯಾ ಹಾಡುಗಳಿಗೆ ತಕ್ಕಷ್ಟು ವಿವರಣೆ ಕೊಟ್ಟರೆ ಸಾಕಿತ್ತು. ಆದರೆ ಇಂದು, ತರಗತಿಗಳಿಗೆ ಬರುವ ಮಕ್ಕಳಿಗೆ ಹೆಚ್ಚು ಗಮನಕೊಟ್ಟು ಕಥೆಗಳನ್ನು ದಾಟಿಸಬೇಕಾಗಿದೆ. ನಾನು ತರಗತಿಯಲ್ಲಿ ಅವರಿಗೆ ಕಥೆ ಹೇಳುತ್ತೇನೆ. ಅಷ್ಟು ಮಾತ್ರವಲ್ಲ, ಅವರಿಗೆ ಅದಾಗಲೇ ಗೊತ್ತಿರುವ ಕಥೆಗಳೇನು ಎಂದು ಅವರಿಂದಲೇ ಹೇಳಿಸುತ್ತೇನೆ. ಇದರಿಂದಾಗಿ ಕಥೆಗಳ ಹಲವು ಆಯಾಮಗಳನ್ನು ಕಲಿಯುವ ಅವಕಾಶ ನನಗೂ ಲಭ್ಯವಾಗುತ್ತದೆ. ಕಥೆಗಳನ್ನು ನೃತ್ಯಕ್ಕೆ ಹೇಗೆ ಅಳವಡಿಸಿಕೊಳ್ಳಬಹುದು ಎಂದು ಅವರಿಗೆ ತಿಳಿಹೇಳಿದಂತೆಯೂ ಆಗುತ್ತದೆ. ಇನ್ನು ಎಲ್ಲ ಕಲಾವಿದರೂ ಓದಿನತ್ತ ಮನಸ್ಸು ಮಾಡುವುದಿಲ್ಲ. ಯಾರಿಗೆ ಆ ಬಗ್ಗೆ ಸ್ವಲ್ಪ ಆಸಕ್ತಿಯಿದೆಯೋ, ಅದನ್ನು